ಸರ್ಕಾರಕ್ಕೆ ಗೌರವ ಬರುತ್ತದೆ. ಅದರ ಅರಿವಿಲ್ಲದೆ ಅವರು ಮಾತನಾಡುತ್ತಿದ್ದಾರೆ. ಆದ್ದರಿಂದ ದಯಮಾಡಿ ಆ ಸ್ಟೇ ಅನ್ನು ವಾಪಾಸ್ಸು ತೆಗೆದುಕೊಳ್ಳಬೇಕೆಂದು ತಿಳಿಸಿ.....

ಶ್ರೀ ಅಂಜನಾಮೂರ್ತಿ : ಮಾನ್ಯ ಚೆನ್ನಿಗಪ್ಪನವರು ದಾರಿ ಬಿಟ್ಟು ಹೋಗುತ್ತಿದ್ದಾರೆ. ಅವರೇನು ಮಾತನಾಡುತ್ತರೆ ಎನ್ನುವ ವಿಷಯ ಅವರಿಗೆ ಅರ್ಥವಾಗುವುದಿಲ್ಲ. ಒಂದೇ ಸಾರಿ ಪೂರ್ವಕ್ಕೆ ಪಶ್ಚಿಮಕ್ಕೆ ಹೋಗಿಬಿಡುತ್ತಾರೆ. ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ಆಶ್ರಯ ಸಮಿತಿಗೆ ನೀವು ಛೇರ್ಮನ್ ಇರಬಹುದು. ಬಗರ್‌ಹುಕಂ ಸಾಗುವಳಿ ಸಮಿತಿಗೆ ನಾನು ಛೇರ್ಮನ್ ಅದು ನನ್ನ ತೀರ್ಮಾನ ಆದರೆ ನೀವು ಆ ಫೈಲ್ ಮೇಲೆ ಆ ರೀತಿ ಬರೆಯಬಾರದು, ಅದು ಲಕ್ಷಣವಲ್ಲವೆಂದು ಹೇಳಿದ್ದೇನೆ.

ಶ್ರೀ ಸಿ.ಚೆನ್ನಿಗಪ್ಪ : ನನ್ನ ಕ್ಷೇತ್ರದ ಬಡವರಿಗೆ ಆದ ಅನ್ಯಾಯ, ನನ್ನ ತಾಲ್ಲೂಕಿನ ಜಮೀನಿನ ಬಗ್ಗೆ ಮಾತ್ರ ನನಗೆ ಸಂಬಂಧಿಸಿದ್ದು, ನಿಮ್ಮ ಫೈಲ್ ಬಗ್ಗೆ ಬರೆಯದ ನೈತಿಕ ಹಕ್ಕು ನನಗಿಲ್ಲ, ನಾನು ಹಾಗೆ ಬರೆಯುವುದಿಲ್ಲ. ನನಗೆ ಸಂಬಂಧಪಟ್ಟ ಕಡತಕ್ಕೆ ಬರೆಯುವ ಅಧಿಕಾರ ನನಗೆ ಇದೆ, ನಾನು ಮಾಡುತ್ತೇನೆ. ಜನರು ನನಗೆ ಕೊಟ್ಟಿರುವ ಅಧಿಕಾರವನ್ನು ನನ್ನ ಜನರಿಗೋಸ್ಕರ ಕೊಡಬೇಕಾಗಿದೆ, ಅದು ಸರ್ಕಾರದ ತತ್ವ, ಅದನ್ನು ನಾನು ನಿರ್ವಹಿಸುತ್ತೇನೆ. ಇದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಈಗ ತಂದಿರುವ ಸ್ಟೇ ಬಗ್ಗೆ ದಯಮಾಡಿ ಸರ್ಕಾರ ಎನ್‌ಕ್ವೈರಿ ಮಾಡಲಿ ಅದು ಬಡವರಿಗೆ ಸೇರಿದ್ದು. ಈ ಅನ್ಯಾಯಕ್ಕೆ ಸರ್ಕಾರವೇ ಹೊಣೆ ಎಂಬ ಮಾತನ್ನು ನೇರವಾಗಿ ಪ್ರತಿಪಾದನೆ ಮಾಡಿ ಕೊಡತಕ್ಕಂತಹ ನವ ಗ್ರಾಮದ ಮನೆಗಳು ಬಡವರಿಗೆ ಸಾಲದು, ಈಗ ಕೊಟ್ಟಿರುವುದಕ್ಕೆ ಸೈಟಿಲ್ಲ, ಇವರು ಹಣವನ್ನು ಬಿಡುಗಡೆ ಮಾಡಿಲ್ಲ. ಈ ವಿಚಾರಗಳಾವುದನ್ನು ಪ್ರಸ್ತಾಪ ಮಾಡದೆ ಹನ್ನೊಂದು ಲಕ್ಷ ಮನೆಗಳು, ನವ ಗ್ರಾಮಗಳು, ಅದರಲ್ಲಿ ಲೈಟ್, ಎಲಿಕ್ಟ್ರಿಫಿಕೇಶನ್ ಬಗ್ಗೆ ಹೇಳಿರುವುದು ಸತ್ಯಕ್ಕೆ ದೂರವಾದ ವಿಚಾರ, ಬಡವರ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕುವಂತಹ ವಿಚಾರವಾಗಿದೆ. ಇವತ್ತು ಸರ್ಕಾರ ಜನತೆಗೆ ನೀಡಿರುವ ಈ ಬಜೆಟ್ ಸತ್ಯಕ್ಕೆ ದೂರವಾಗಿದ್ದು ನೂರಕ್ಕೆ ನೂರರಷ್ಟು ಸುಳ್ಳು ಅದರಲ್ಲಿ ತುಪ್ಪದಂತೆ ಒಳ್ಳೆಯ ಮಾತನಾಡಿ ಸರ್ಕಾರ ಹೊಟ್ಟೆ ಹಸಿಯುವಂತಹ ಕೆಲಸವನ್ನು ಇವತ್ತು ಸರ್ಕಾರ ಮಾಡಿದೆಯೆಂದು ಹೇಳಿ ಇದು ನಿರರ್ಥಕ ಮಾತು ಇದು ಸುಳ್ಳಿನ ಕಂತೆ ಎಂಬ ಮಾತನ್ನು ಹೇಳಿ, ತಾವು ನನಗೆ ಇವತ್ತು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್ : ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1–48ಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3–00 ಗಂಟೆಗೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3–30 ಘಂಟೆಗೆ ಪುನಃ ಸಮಾವೇಶಗೊಂಡಿತು ಶ್ರೀ ಎಂ.ವಿ.ವೆಂಕಟಪ್ಪನವರು ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರುಯ

2. ಅಧ್ಯಕ್ಷರ ಅಪ್ಪಣೆ ಮೇರೆಗೆ:

ಛಾಪಾ ಕಾಗದ ಆರೋಪಿ ಶ್ರೀ ಕರೀಂಲಾಲಾ ತೆಲಗಿ ಕುರಿತು

†**ಶ್ರೀ ಜಗದೀಶ್ ಶೆಟ್ಟರ್** : ಸನ್ಮಾನ್ಯ ಅಧ್ಯಕ್ಷರೇ ಬೆಳಿಗ್ಗೆ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಿದ್ದೆ. ಈಗೆ ನಾನು ಆ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಬಂದ ಮೇಲೆ ಉತ್ತರ ಕೊಡಲಿ.

ಅಧ್ಯಕ್ಷರು : ಬೆಳಿಗ್ಗೆ ಮಾನ್ಯ ಸಚಿವರು ಆ ಮೇಲೆ ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದರು. ಈಗ Introduction of Bills ಇತ್ಯಾದಿಗಳನ್ನು ಮಾಡುತ್ತಾ ಇರೋಣ ಅಷ್ಟರೊಳಗೆ ಅವರು ಬರುತ್ತಾರೆ.

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಮತ್ತು ಭಾಷಣವನ್ನು ಸೂಚಿಸಿಲ್ಲುವುದು ಕಂಡುಬರುತ್ತದೆ)

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಬೆಳಗಿನ ಪತ್ರಿಕೆಯಲ್ಲಿ ಕೆಲವು ವಿಷಯಗಳು ಪ್ರಕಟವಾಗಿವೆ. ಅದರಲ್ಲಿ ಪ್ರಮುಖವಾಗಿ ಕರೀಂಲಾಲಾ ತೆಲಗಿಯ ಹಗರಣದ ಬಗ್ಗೆ ಈ ಸದನದಲ್ಲಿ ನಮ್ಮ ಪಕ್ಷದ ಪರವಾಗಿ, ಏನೊಂದು ವಿಷಯಗಳನ್ನು ನಾವು ಪ್ರಸ್ತಾಪ ಮಾಡಿದ್ದೇವೆ, ಮತ್ತು ಕೆಲವೊಂದು ವ್ಯಕ್ತಿಗಳ ಬಗ್ಗೆ, ಕೆಲವೊಂದು ಮಂತ್ರಿಗಳು ಮತ್ತು ಪೋಲಿಸ್ ಅಧಿಕಾರಿಗಳ ಬಗ್ಗೆ, ಬಿ.ಜೆ.ಪಿಯವರು ನಾವೇನು ಹೋರಾಟ ಮಾಡಿದ್ದೇವು ಅದಕ್ಕೆ ಪೂರಕವಾದಂಥ ಸುದ್ದಿಗಳು ಇವೊತ್ತು ಪತ್ರಿಕೆಗಳಲ್ಲಿ ಬಂದಿವೆ. ಕರೀಂಲಾಲಾ ತೆಲಗಿ ಏನಿದ್ದಾನೆ, ಆತನಿಗೆ Narco Analysis Test ಮಾಡಿಸಿ ಎಂದು ನಾವು ಮೊದಲಿನಿಂದಲೂ ಸದನದಲ್ಲಿ ಒತ್ತಾಯ ಮಾಡುತ್ತಾ ಇದ್ದೇವೆ. ನಮ್ಮ ಸ್ಟ್ಯಾಂಪಿಟ್‌ನವರು ಏನು ಇನವೆಸ್ಟಿಗೇಶನ್ ಮಾಡುತ್ತಾ ಇದ್ದಾರೆ, ಆ ಇನ್‌ವೆಸ್ಟಿಗೇಶನ್ ಆಫೀಸರ್ ಏನು ಇರುತ್ತಾರೆ, ಯಾವ ತೀವ್ರಗತಿಯಿಂದ ಇಲ್ಲಿ ಇನ್‌ವೆಸ್ಟಿಗೇಶನ್ ಆಗಬೇಕಾಗಿತ್ತು, ಅದು ಆಗಿಲ್ಲ. ಮಹಾರಾಷ್ಟ್ರದಲ್ಲಿ ಎಸ್‌ಐಟಿ ಎಂಬ ಇನ್‌ವೆಸ್ಟಿಗೇಶನ್ ಅಥಾರಿಟಿ ಏನಿದೆ, ಅವರು ಯಾವರೀತಿಯಲ್ಲಿ ತೀವ್ರಗತಿಯಿಂದ ಈ ಒಂದು ಪ್ರಕರಣವನ್ನು ಇನ್‌ವೆಸ್ಟಿಗೇಶನ್ ಮಾಡುವಂಥಾದ್ದು. ಕೆಲವು ಪೋಲಿಸ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವಂಥಾದ್ದು, ಹಾಗೂ ಕೆಲವೊಂದು ಶಾಸಕರನ್ನೇ ಅವರು ಅರೆಸ್ಟ್ ಮಾಡಿ ಅವರನ್ನು ಜೈಲಿಗೆ ಕಳುಹಿಸುವಂಥಾದ್ದು, ಇವೆಲ್ಲಾ ಮಹಾರಾಷ್ಟ್ರದಲ್ಲಿ ನಡೆಯುತ್ತ ಇದೆ. ಆದರೆ ಕರ್ನಾಟಕದಲ್ಲಿ ಇದು ಆಗುತ್ತಾ ಇಲ್ಲ ಎಂದು ನಾವು ಪ್ರತಿಸಲವೂ ಹೇಳುತ್ತಾ ಬಂದಿದ್ದೇವೆ. ಮತ್ತು ಇಲ್ಲಿಯವರೆಗೆ ನಾನು ಪ್ರಸ್ತಾಪ ಮಾಡಿದ್ದೆ, ಕೇವಲ ರೋಶನ್ ಬೇಗ್‌ರವರ ಸಂಬಂಧ. ಒಬ್ಬ ಮಂತ್ರಿಯಾಗಿ ಇದರಲ್ಲಿ ಇನ್‌ವಾಲ್ವ್ ಆಗಿರುವುದು ಅಷ್ಟೇ ಅಲ್ಲದೆ, ನಾಲ್ಕೈದು ಜನ ಮಂತ್ರಿಗಳೂ ಸಹಿತ ತೆಲಗಿಯ ಜೊತೆಗೆ ಸಂಪರ್ಕ ಇಟ್ಟುಕೊಂಡಿದ್ದಾರೆ ಮತ್ತು ಈ ಹಗರಣದಲ್ಲಿ ಭಾಗಿಯಾಗಿದ್ದಾರೆ, ಅದೇ ರೀತಿಯಲ್ಲಿ ಕೆಲವೊಂದು ಹಿರಿಯ ಪೋಲಿಸ್ ಅಧಿಕಾರಿಗಳು, ಈ ಒಂದು ಪ್ರಕರಣದಲ್ಲಿ ಶಾಮೀಲಾಗಿದ್ದಾರೆ, ತೆಲಗಿ ಜೊತೆಗೆ ಶಾಮೀಲಾಗಿದ್ದಾರೆ ಎನ್ನುವಂಥ ನೇರವಾದ ಆರೋಪವನ್ನು ನಾವು ಈ ಸದನದಲ್ಲಿ ಮಾಡಿದ್ದೆವು. ಕಳೆದ ಅಧಿವೇಶನದಲ್ಲಿ ನಾವೆಲ್ಲ ಚರ್ಚೆ ಮಾಡಿ ಧರಣಿ ಮುಂತಾಗಿ ಹೋರಾಟವಾದ ಮೇಲೆ, ತಾವು ನಮ್ಮನ್ನು ಹೊರಗೆ ಹಾಕಿದ್ದೀರಿ.

ಅಧ್ಯಕ್ಷರು : ನಾನು ನಿಮ್ಮನ್ನು ಹೊರಗೆ ಹಾಕಿಲ್ಲ, ನೀವುಗಳು ಹಾಕಿಸಿಕೊಂಡಿರಿ.

ಶ್ರೀ ಜಗದೀಶ್ ಶೆಟ್ಟರ್ : ಆಯಿತು, ಅದನ್ನು ಏನಾದರೂ ಇಂಟರ್‌ಪ್ರಿಟೇಶನ್ ಮಾಡಿಕೊಳ್ಳೋಣ, ನಾನು ಆ ಸಂದರ್ಭದಲ್ಲಿಯೇ ಹೇಳಿದ್ದೆ. ಈ ಪ್ರಕರಣದಲ್ಲಿ ಏಳೆಂಟು ಜನ ಹಿರಿಯ ಪೋಲಿಸ್ ಅಧಿಕಾರಿಗಳು ಇದ್ದಾರೆ. ತೆಲಗಿಯ ಈ ವ್ಯವಹಾರಕ್ಕೆ ಆತನು ಜೈಲ್‌ನಲ್ಲಿದ್ದಾಗಲೂ ಸಹಿತ, ಜೈಲ್‌ನಲ್ಲಿಯೂ ಕೂಡ ಆತನಿಗೆ ಮೊಬೈಲ್ ಸೇವೆ, ಉಟೋಪಚಾರ, ಮುಂತಾಗಿ ಎಲ್ಲ ಸೌಕರ್ಯಗಳನ್ನು ಅವನ ಜೊತೆಗೆ ಶಾಮೀಲಾದ ಪೋಲಿಸ್ ಅಧಿಕಾರಿಗಳು ಕೊಟ್ಟಿದ್ದರು ಎಂಬ ನೇರವಾದ ಅಪಾದನೆಯನ್ನು ನಾನು ಮಾಡಿದ್ದೆನು. 8–10 ಜನ ಪೋಲಿಸ್ ಅಧಿಕಾರಿಗಳು ಇನ್‌ವಾಲ್ವ್ ಆಗಿದ್ದಾರೆಂಬ ಮಾತನ್ನು ಕೂಡ ನಾನು ಹೇಳಿದ್ದೆ. ಆಗ ಮಾನ್ಯ ಖರ್ಗೆಯವರು ಉತ್ತರವನ್ನು ಕೊಟ್ಟರು. ಇದರಲ್ಲಿ ಯಾವ ಪೋಲಿಸ್ ಅಧಿಕಾರಿಗಳು ಇಲ್ಲ, ಮಂತ್ರಿಗಳು ಇಲ್ಲ, ಎಂದು ಹೀಗೆ ಉತ್ತರ ಕೊಟ್ಟರು. ಮುಂದೆ ಅಧಿವೇಶನ ಮುಗಿದ ಮೇಲೆ, ನಾಲ್ಕು ಜನ ಪೋಲಿಸ್ ಅಧಿಕಾರಿಗಳು ಸಸ್ಪೆಂಡ್ ಮಾಡಿದ ವಿಚಾರವು ನಮ್ಮ ಕಣ್ಮುಂದೆ ಇದೆ. ಹೀಗಾಗಿ ಈ ವಿಚಾರ ಇವೊತ್ತು ಪತ್ರಿಕೆಯಲ್ಲಿ ಬಂದಿದೆ. ಇವೊತ್ತು ಕನ್ನಡಪ್ರಭ, ಟೈಂಸ್ ಆಫ್ ಇಂಡಿಯ, ಇಂಡಿಯನ್ ಎಕ್ಸ್ ಪ್ರೆಸ್, ವಿಜಯ ಕರ್ನಾಟಕ, ಪ್ರಜಾವಾಣಿ,

ಮೊಬಲಾಗಿ ಎಲ್ಲ ಪತ್ರಿಕೆಗಳಲ್ಲೂ ಬಂದಿದೆ. ಈ ತೆಲಗಿಯ Narco Analysis Test ಮಹಾರಾಷ್ಟ್ರದ ಎಸ್‌ಬಟಿಯವರು ಇಲ್ಲಿ ಕೋರ್ಟ್ ಪರ್ಮಿಶನ್ ತೆಗೆದುಕೊಂಡು ಮಾಡಿದರು. ವಿಕ್ಟೋರಿಯ ಆಸ್ಪತ್ರೆಯಲ್ಲಿ, ಅದಕ್ಕೆ ಸಂಬಂಧಪಟ್ಟಂಥ ಡಾಮಾಲಿನ ಎಂದು ಇದ್ದಾರೆ, ಅವರ ಸಮಕ್ಷಮದಲ್ಲಿ ಈ ಟೆಸ್ಟ್ ಆಯಿತು. ಆ ಟೆಸ್ಟ್ ಸಂದರ್ಭದಲ್ಲಿ ಏನು ಹೇಳಿಕೆಯನ್ನು ತೆಲಗಿ ಹೇಳಿದ್ದಾನೆ, ಆ ಸ್ಟೇಟ್‌ಮೆಂಟ್ ಬಗ್ಗೆ ಕೆಲವೊಂದು ವಿಷಯಗಳು, ಇವೊತ್ತು ಪತ್ರಿಕೆಯಲ್ಲಿ ಬಂದಿವೆ. ಅದರ ಪ್ರಕಾರ ಬೇಗ್‌ರವರ ಹೆಸರು ಹೇಳದಂತೆ ಬೆದರಿಕೆಯು ಇತ್ತು. ಅವನು ಎಲ್ಲಿಯವರೆಗೆ ಹೇಳಿದ್ದಾನೆ ಎಂದರೆ, ತಾನು ಬೆಂಗಳೂರಿನ ಜೈಲ್‌ನಲ್ಲಿದ್ದಾಗ, ಸಚಿವ ರೋಶನ್‌ಬೇಗ್ ಮತ್ತು ಜೈಲ್‌ನಲ್ಲಿ ಡೆಪ್ಯುಟಿ ಸುಪರಿಂಟೆಂಡೆಂಟ್ ಆಗಿದ್ದ ನಂಜಪ್ಪ-ನಂಜಪ್ಪ ಈಗಾಗಲೇ ಸಸ್ಪೆಂಡ್ ಆಗಿದ್ದಾರೆ, ತನಗೆ ಬೆದರಿಕೆ ಒಡ್ಡುತ್ತಿದ್ದರು ಅಷ್ಟೇ ಅಲ್ಲ, ಬೆಂಗಳೂರಿನ ಕೆಲವು ಪೋಲಿಸ್ ಅಧಿಕಾರಿಗಳು ಹಾಗೆ ಮಾಡುತ್ತಿದ್ದರು. ತೆಲಗಿಯ ಮಂಪರು ಪರೀಕ್ಷೆಯ ಸಂದರ್ಭದಲ್ಲಿ ಬಾಯಿ ಬಿಟ್ಟ ಗುಟ್ಟು ಇದು. ರೋಶನ್‌ಬೇಗ್ ಮತ್ತು ನಂಜಪ್ಪ ಅವರ ಹೆಸರನ್ನು ಹೇಳುವಷ್ಟು ಸುಲಭವಾಗಿ ಕರ್ನಾಟಕದ ಇತರ ಪೋಲಿಸ್ ಅಧಿಕಾರಿಗಳ ಮತ್ತು ವಿಐಪಿಗಳ ಹೆಸರನ್ನು ತೆಲಗಿ ಹೇಳಲಿಲ್ಲ. ರೋಶನ್ ಬೇಗ್ ಜೊತೆಗೆ ವಿದೇಶ ಪ್ರಯಾಣ ಮಾಡಿರುವುದಾಗಿಯೂ, ಮಂಪರು ಪರೀಕ್ಷೆಯ ಸಂದರ್ಭದಲ್ಲಿ ತೆಲಗಿ ಹೇಳಿದ್ದಾನೆ. ಬೆಂಗಳೂರಿನ ಪೋಲಿಸ್ ಅಧಿಕಾರಿಗಳು ನನ್ನನ್ನು ಬೆದರಿಸಿದ್ದರು, ರೆಹಾನ್ ಮತ್ತು ರೋಶನ್ ಜೊತೆಗೆ ಬಹಳವಾದ ಸಂಬಂಧ ನನಗೆ ಇತ್ತು. ರೆಹಾನ್‌ಗೆ ನಾನು ಸನಾಹ್ ಆಸ್ಪತ್ರೆಯಲ್ಲಿ ಕೆಲಸವನ್ನು ಕೊಡಿಸಿದ್ದೆ. ಆಮೇಲೆ. ಇನ್ನೊಂದು ಪತ್ರಿಕೆಯಲ್ಲಿ ಹೀಗೆ ಇದೆ. "About the role of police Officers and Politicians from Karnataka, Telgi refused to name anyone saying he feared for his life, But later revealed that names of Politicians and Police Officers, who had allegedly threatned him . However these names have been masked by the SIT in the report. Telgi said the threat to his life comes from VVIP's and important Police Officers and others who have taken help from him, the report said. Even he has links with some Ministers in the Karnataka Government M.L.A's DIG, SP, ACP and Police Inspectors. ಈ ರೀತಿಯಾಗಿ Narco Analysis Test ನಲ್ಲಿ ಅತನ ಸ್ಟೇಟ್‌ಮೆಂಟ್ ಏನು ಬಂದಿದೆ, ಅದರ ಬಗ್ಗೆ ಕೋರ್ಟ್‌ನಲ್ಲಿ ಈಗಾಗಲೇ ಸ್ಟೇಟ್‌ಮೆಂಟ್‌ನ್ನು ಸಬ್‌ಮಿಟ್ ಮಾಡಲಾಗಿದೆ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆ ಅಂದರೆ, ನಾವು ಈ ಒಂದು ಪ್ರಕರಣದ ಬಗ್ಗೆ ಕಳೆದ ಎರಡು ವರ್ಷಗಳಿಂದ ಕೆಲವೊಂದು ವಿಷಯಗಳನ್ನು ನಾವೇನು ಬೆಳಕಿಗೆ ತಂದಿದ್ದೇವೆ, ಆ ಎಲ್ಲ ವಿಷಯಗಳೂ ಇವೊತ್ತು ಡಿಸ್‌ಕ್ಲೋಸ್ ಆಗುತ್ತಿವೆ. ಅದಕ್ಕಾಗಿ ಇವೊತ್ತು ರೋಶನ್‌ಬೇಗ್‌ರವರು ಬಂದಿದ್ದಾರೆ, ಅವರು ಮೆಕ್ಕಾಕ್ಕೆ ಹೋಗಿದ್ದರು, ಅಲ್ಲಿಂದ ವಾಪಸ್ ಆಗಿ, ಬಂದಿದ್ದು ಆಗ ಸದನಕ್ಕೂ ಬಂದಿದ್ದರು. ಆಗ ನಾನು ವಿಷಯವನ್ನು ಪ್ರಸ್ತಾಪಿಸಬೇಕೆಂದು ಮಾಡಿದ್ದೆ. ಅವರು ಸದನದಲ್ಲಿ ಇರಬೇಕಾಗಿತ್ತು. ಅವರ ಮುಂದೆಯೇ ಈ ಚರ್ಚೆ ಆಗಬೇಕಾಗಿತ್ತು. ಏಕೆಂದರೆ ನಾನು ಹಿಂದೆಯೂ ಹೇಳಿದ್ದೆ, ಅವರಿಂದ ಸದನವನ್ನು ಎದುರಿಸಲು ಆಗುತ್ತಾ ಇಲ್ಲ. ಅವರು ಇಲ್ಲಿದ್ದು ಚರ್ಚೆಯಲ್ಲಿ ಭಾಗವಹಿಸಿಬೇಕು ಮತ್ತು ನಾವೇನು ಪ್ರಶ್ನೆಗಳನ್ನು ಕೇಳುತ್ತೇವೆ ಅದಕ್ಕೆ ಅವರು ಸ್ಪಷ್ಟೀಕರಣವನ್ನು ಕೊಡಬೇಕಾಗಿತ್ತು. ಅದಕ್ಕೆ ಅವರು ತಯಾರಾಗುತ್ತಾ ಇಲ್ಲ. ರೋಶನ್‌ಬೇಗ್‌ರವರ ನೇರವಾದಂಥ

ಸಂಬಂಧದ ಬಗ್ಗೆ ಇವೊತ್ತು ಈ ರೀತಿಯಾಗಿ ಬಂದಂಥ ಸಂದರ್ಭದಲ್ಲಿ ನಾವೇನು ಡಿಮಾಂಡ್ ಮಾಡಿದ್ದೆವು ಅಂದರೆ, ರೋಶನ್‌ಬೇಗ್‌ರ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕು, ಎಂದು ಹೇಳಿದ್ದೆವು. ಆದರೆ ಈ ರೀತಿಯಾಗಿ ಸ್ಪಷ್ಟವಾಗಿ ತೆಲಗಿಯ ಹೇಳಿಕೆಯು ಬಂದ ಮೇಲೆಯೂ ಸರಕಾರ ಹಿಂದೇಟು ಹಾಕುತ್ತಿದೆ ಅಂದರೆ ನನಗೆ ಅರ್ಥವಾಗುತ್ತಾ ಇಲ್ಲ. ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕು ಮತ್ತು ಅವರನ್ನು ಅರೆಸ್ಟ್ ಮಾಡಬೇಕು ಎಂಬ ಬೇಡಿಕೆಯನ್ನು ನಾವೇನು ಇಟ್ಟಿದ್ದೆವು. ಅದನ್ನು ನಾವು ಮುಂದುವರಿಸುತ್ತೇವೆ ಮತ್ತು ಸರಕಾರದ ಮೇಲೆ ಒತ್ತಾಯವನ್ನು ಮಾಡುತ್ತೇವೆ. ಹಾಗೆಯೇ ಇನ್ನೂ ನಾಲ್ಕೈದು ಜನ ಮಂತ್ರಿಗಳು, ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ, ಅವರ ಜೊತೆಗೆ ನಮ್ಮ ಸಂಪರ್ಕವಿದೆ, ಅನ್ನುವುದನ್ನು ಸ್ಪಷ್ಟವಾಗಿ ತೆಲಗಿ ಹೇಳಿದ್ದರಿಂದ ಆ ಮಂತ್ರಿಗಳು ಯಾರು ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಗೃಹಸಚಿವರಾಂಥ ಖರ್ಗೆಯವರು– ಅವರ ಒಂದು ನಾಲೆಡ್ಜ್‌ನಲ್ಲಿದೆ ಎನ್ನುವಂತಾದ್ದು.. ಹೀಗಾಗಿ ಅವರುಗಳ ಹೆಸರುಗಳನ್ನು ಡಿಸ್‌ಕ್ಲೋಸ್ ಮಾಡಬೇಕು. ಹಾಗೆಯೇ ಪೋಲಿಸ್ ಅಧಿಕಾರಿಗಳು ಯಾರಿದ್ದಾರೆ, ಅವರ ಹೆಸರುಗಳನ್ನು ಡಿಸ್‌ಕ್ಲೋಸ್ ಮಾಡಬೇಕು, ಮತ್ತು ಅವರುಗಳ ರಾಜಿನಾಮೆ ಮತ್ತು ಪೋಲಿಸ್ ಅಧಿಕಾರಿಗಳ ಮೇಲೆ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವಂತಾದ್ದು ಆಗಬೇಕು. ಈ ಒತ್ತಾಯವನ್ನು ನಾನು ಮಾಡುತ್ತಾ ಇದ್ದೇನೆ. ಮಾನ್ಯ ಖರ್ಗೆಯವರು ಹೇಳಬಹುದು, ಇಲ್ಲ ನಾವು ಪ್ರಕರಣವನ್ನು ಸಿಬಿಐಗೆ ಕೊಟ್ಟಿದ್ದೇವೆ, ಈಗ ಅದು ನಮ್ಮ ಕೈಯಲ್ಲಿಲ್ಲ. ನಮಗೆ ಏನೂ ಮಾಡುವುದಕ್ಕಾಗುವುದಿಲ್ಲ, ಎನ್ನಬಹುದು. ಆದರೆ ಇನ್ನೂ ಪೂರ್ತಿಯಾಗಿ ಹ್ಯಾಂಡ್‌ಓವರ್ ಆಗಿಲ್ಲ. ಎಂದು ಅವರು ಪತ್ರ ಬರೆದಿದ್ದಾರೆ, ಮತ್ತು ಕೆಲವು ಕೇಸುಗಳನ್ನು ತೆಗೆದುಕೊಳ್ಳುತ್ತೇವೆಂದಿದ್ದಾರೆ, ಈ ಒಂದು ಸ್ಟ್ಯಾಂಪಿಟ್ ಅಥಾರಿಟಿ ಏನಿದೆಯಲ್ಲ, ಅವರ ಕೈಕೆಳಗೆ ಈ ಎಲ್ಲ ಪೇಪರ್‌ಗಳಿವೆ, ಮಾಹಿತಿಗಳಿವೆ. ಕೇಸ್ ಅವರ ಅಧೀನದಲ್ಲಿಯೇ ಇದೆ ಹೀಗಾಗಿ ತತ್‌ಕ್ಷಣವೇ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಿದೆ, ಆ ಕ್ರಮಗಳನ್ನು ಕೈಗೊಳ್ಳಬೇಕೆಂಬ ಒತ್ತಾಯವನ್ನು ಮಾಡುತ್ತೇವೆ. ಸುಮ್ಮನೆ ಯಾವುದೋ ಒಂದು ನೆಪವನ್ನು ಹೇಳಿ, ನಾವು ಸಿಬಿಐಗೆ ಕೊಟ್ಟಿದ್ದೇವೆ ಅವರೇ ಏನಾದರೂ ಮಾಡಿಕೊಳ್ಳಲಿ ಎಂಬ ನೆಪ ಹೇಳುವಂತಾದ್ದು ಆಗಬಾರದು ಎಂದು ಹೇಳಿ ನಾನು ಒತ್ತಾಯವನ್ನು ಮಾಡುತ್ತಿದ್ದೇನೆ,

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು) :ಅಧ್ಯಕ್ಷರೇ, ಏನು ಮಾನ್ಯ ಜಗದೀಶ್ ಶೆಟ್ಟರ್ ಅವರು ಪತ್ರಿಕೆಯಲ್ಲಿ ಬಂದದ್ದು ಮತ್ತು ಪುನಃ ಹೈಕೋರ್ಟಿನಲ್ಲ ತೆಲಗಿ ಮೇಲೆ ಪಾಲ್ಗ್ರಫಿ ಅನಾಲಿಸಿಸ್ ಮಾಡಿ ಅದರ ಬೇಸಿಸ್ ಮೇಲೆ ಆತ ಏನು ಹೇಳಿದ್ದಾನೆ ಎಂಬುದು ಪತ್ರಿಕೆಯಲ್ಲಿ ಬಂದಿದೆ, ಅದರ ಆಧಾರದ ಮೇಲೆ ಅವರೂ ಕೂಡ ಇಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ಯಾವ ವಿಷಯವನ್ನೂ ಮುಚ್ಚಿಟ್ಟಿಲ್ಲ. ಈ ಸದನದಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ, ನಮ್ಮ ಸ್ಟ್ಯಾಂಪಿಟ್ ಬಹಳ ಉತ್ತಮವಾಗಿ ಕೆಲಸ ಮಾಡಿದೆ, ಅದಕ್ಕಾಗಿ ಇದನ್ನು ಸಿಬಿಐಗೆ ಕೊಡುವ ಅವಶ್ಯಕತೆ ಇಲ್ಲ ಎಂಬ ವಾದ ಕೂಡ ಈ ಸದನದಲ್ಲಿ ನಡೆಯಿತು. ನಡೆದಾಗ ಅನೇಕ ಜನ ಅದರ ಬಗ್ಗೆ ಒಪ್ಪಿಗೆ ಕೊಡಲಿಲ್ಲ, ಹೆಚ್ಚೂ ಕಡಿಮೆ ಏನೋ ಸರ್ಕಾರವೇ ಮುಚ್ಚಿಡುವ ಕೆಲಸ ಮಾಡುತ್ತಾ ಇದೆ ಎಂಬ ಸಂಶಯ ದೃಷ್ಟಿಯಿಂದ ನೋಡಿದರು, ಕೊನೆಗೆ ನಾವು ಸಿಬಿಐಗೆ ಅದನ್ನು ಒಪ್ಪಿಸಿದ್ದೇವೆ. ಸಿಬಿಐನವರೂ ಕೂಡ ಹಿಂದೆ ನಾವು ಮಾಡುವುದಕ್ಕೆ ಆಗುವುದಿಲ್ಲ ಎಂದು ಪತ್ರವನ್ನೂ ಕೂಡ ಬರೆದಿದ್ದರು. ಮತ್ತು ನಮ್ಮಲ್ಲಿ ಸಿಬ್ಬಂದಿ ಇಲ್ಲ ಎಂಬ ಮಾತನ್ನು ಅವರು ಇವತ್ತು ಸುಪ್ರೀಂ ಕೋರ್ಟಿನಲ್ಲಿ ಅಫಿಡವಿಟ್ ಹಾಕಿ ಹೇಳಿಕೊಂಡಿದ್ದಾರೆ ನಮ್ಮಲ್ಲಿ ಸಿಬ್ಬಂದಿ ಇಲ್ಲ, ಮಾಡುವುದಕ್ಕೆ ಆಗುವುದಿಲ್ಲ, ಕೆಲವೇ ಕೇಸುಸ್

ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದೇನೆ ಆಗಲಿ, ಆ ಕೇಸನ್ನು ಏನು ಸಿಬಿಐಗೆ ಒಪ್ಪಿಸಬೇಕಾಗಿತ್ತೋ ಅದೆಲ್ಲವನ್ನೂ ಮಾಡಿದ್ದೇವೆ. ಅದನ್ನು Further investigation ಮಾಡುವುದು ಬಿಡುವುದು ಅವರಿಗೇ ಬಿಟ್ಟಂತಹ ವಿಚಾರ ನಮಗೆ ಪುನಃ ಪುನಾ ಅಥವಾ ಬಾಂಬೆ ಹೈಕೋರ್ಟುಗಳಿಂದಾಗಲೀ, ಸುಪ್ರೀಂ ಕೋರ್ಟಿನಿಂದಾಗಲೀ, ಅಥವಾ ಕರ್ನಾಟಕ ಹೈಕೋರ್ಟ್‌ನಿಂದಾಗಲೀ ಡೈರೆಕ್ಷನ್ ಬಂದು ಇಂತಿಂಥವರು ಇನ್‌ವಾಲ್ವ್ ಇದ್ದಾರೆ ಅಥವಾ ಈ ರೀತಿ ಇದೆ ಎಂದು ನಮಗೆ ಸುಳಿವು ಕೊಟ್ಟಿರೆ ಖಂಡಿತವಾಗಿ ಯಾರೇ ಇರಲಿ ಅವರ ಮೇಲೆ ಕ್ರಮ ಜರುಗಿಸುತ್ತೇವೆ. ಇದರಲ್ಲಿ ಮುಚ್ಚುತಕ್ಕಂತಹದ್ದು ಇಲ್ಲ ಮರೆಯತಕ್ಕಂತಹದ್ದೂ ಇಲ್ಲ. ಅದರೆ ಕೆಲವು ಡ್ರಗ್ಸ್ Polygraphy analysis ಮೇಲೆ ನಾವು ಎಲ್ಲರನ್ನು ಕೂಡ ಹಿಡಿದುಹಾಕುವುದಕ್ಕೆ ಆಗುವುದಿಲ್ಲ, ಏಕೆಂದರೆ ಅದು ಸಂಪೂರ್ಣ ಎವಿಡೆನ್ಸ್ ಅಲ್ಲ, ಅಥವಾ ಆಕ್ಯೂಸ್ಡ್ ಹೇಳುವುದನ್ನು ಪೂರ್ತಿ ನಂಬಲು Evidence Act ನಲ್ಲಿ ಅವಕಾಶ ಇರುವುದಿಲ್ಲ. ಆದ್ದರಿಂದ ಬರೀ ಅವರ ಹೇಳಿಕೆ ಮೇಲೆ ಏನೂ ಮಾಡಲು ಆಗುವುದಿಲ್ಲ. ಇವತ್ತು ಪೂನಾ ಅಥವಾ ಬಾಂಬೆ ಹೈಕೋರ್ಟಿನವರು ಇದು ನಮಗೆ ನಿಶ್ಚಿತವಾಗಿ ಗೊತ್ತಾಗಿದೆ, ಇಂತಿಂಥವರ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕು ಅಂದರೆ ಖಂಡಿತವಾಗಿ, ಅವರು Police Officer ಇರಲಿ ರಾಜಕಾರಣಿಗಳಿರಲಿ, ಪತ್ರಿಕಾ ಮಿತ್ರರಿರಲಿ, ನಾವಿರಲಿ ಅವರ ಮೇಲೆ ಕ್ರಮ ಜರುಗಿಸುತ್ತೇವೆ. ಆದರೆ ಕೇವಲ Polygraphic analysisನಲ್ಲಿ ಈ ರೀತಿ ಹೇಳಿದ್ದಾರೆ ಎಂದು ಅದರ ಮೇಲೆ, ನಾವು ಮಾಡುವುದಕ್ಕೆ ಆಗುವುದಿಲ್ಲ, ಅದಕ್ಕಾಗಿ ನೀವು ಕೋರ್ಟಿನ ಡೈರೆಕ್ಷನ್ ಕಾದುನೋಡೋಣ, ಯಾವರೀತಿ ಅವರು ಆದೇಶ ಕೊಡುತ್ತಾರೆ, ಅದರ ಬಗ್ಗೆ ಅವರು ಏನು ಹೇಳುತ್ತಾರೆ ಅದನ್ನು ತಿಳಿದುಕೊಂಡು ಮುಂದಿನ ಕ್ರಮ ಜರುಗಿಸೋಣ, ಈಗಾಗಲೇ ಈ ಸಮಸ್ಯೆ ಸುಪ್ರೀಂ ಕೋರ್ಟಿನ ಮುಂದಿದೆ, ಮುಂಬೈ ಹೈಕೋರ್ಟ್ ಮುಂದಿದೆ, ಮತ್ತು ಸಿಬಿಐಗೆ ಕೂಡ ಒಪ್ಪಿಸಲಾಗಿದೆ, ಈ ಮೂರೂ ವಿಜನ್ಸಿ ಮುಂದೆ ಇದು ಇರುವುದರಿಂದ ಒಂದು ಕಡೆ ಜ್ಯುಡಿಶಿಯರಿ, ಇನ್ನೊಂದು ಕಡೆ C.B.I agency ಅವರು ಕ್ರಮವನ್ನು ಜರುಗಿಸುತ್ತಾರೆ, ನಮಗೇನು ಅವರು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಆದೇಶ ಕೊಡುತ್ತಾರೆ ಅದರ ಪ್ರಕಾರ ನಾವು ತೆಗೆದುಕೊಳ್ಳುತ್ತೇವೆ, ಮತ್ತು ಸ್ಟಾಂಪಿಟ್‌ನವರು ಇಲ್ಲಿಯವರೆಗೆ ಏನು ಮಾಡಿಕೊಂಡು ಬಂದಿದ್ದಾರೆ ಅದನ್ನು ಹಂತಹಂತವಾಗಿ ಯಾವಾಗ್ಯವಾಗ ಕೇಳಿದ್ದಾರೋ ಆ ಮಾಹಿತಿ ಕೊಟ್ಟುಕೊಂಡೇ ಬಂದಿದ್ದಾರೆ, ಅದರಲ್ಲಿ ಯಾವ ವಾವೂ ಇಲ್ಲ, ಪೂನಾ ಕೋರ್ಟಿನವರೂ ಒಪ್ಪಿದ್ದಾರೆ, ಬಾಂಬೆ ಹೈಕೋರ್ಟಿನವರೂ ಒಪ್ಪಿದ್ದಾರೆ, ಸುಪ್ರೀ ಕೋರ್ಟಿನವರಿಗೂ ಗೊತ್ತಿದೆ, ನಮ್ಮ ಸ್ಟಾಂಪಿಟ್‌ನವರು ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆ ಮುಂದೂ ಕೂಡ ಕೆಲವು ಕೇಸನ್ನು ಅವರಿಗೇ ನೀವು ವಹಿಸಿಕೊಡಬೇಕು ಎಂದು ಆದೇಶವೇನಾದರೂ ಸುಪ್ರೀಂ ಕೋರ್ಟಿನಿಂದ ಬಂದರೆ ಮುಂದಿನ ವಿಚಾರವನ್ನು ಸ್ಟಾಂಪಿಟ್‌ನವರು ನಡೆಸಿಕೊಂಡು ಹೋಗುತ್ತಾರೆ.

ಶ್ರೀ ಜಗದೀಶ ಶೆಟ್ಟರ್ : ನಾವೇನು ಹೇಳುತ್ತಿದ್ದೇವೆ ನಿಮಗೆ Narco analysis ಮಾಡಲು ಆಗಲಿಲ್ಲ, ಮಹಾರಾಷ್ಟ್ರದವರು ಮಾಡಿದ್ದರು, ಇವತ್ತು ಆ Narco analysis test ನ statement ಬಂದಿದೆ, ಇಷ್ಟೆಲ್ಲಾ ಬಂದಮೇಲೂ ನಾವಿನ್ನೂ ವಿಚಾರ ಮಾಡುತ್ತೇವೆ, ನೋಡುತ್ತೇವೆ ನಾಳ್ಕೆದು ಮಿನಿಸ್ಟರ್ಸ್ ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ ಎಂದು ನಾವು ಮೊದಲಿನಿಂದಲೂ

ಹೇಳುತ್ತಿದ್ದೇವೆ, ಇದರಲ್ಲಿ ಇನ್ನೂ ನಾಲ್ಕೈದು ಮಂದಿ ಹಿರಿಯ ಪೋಲಿಸ್ ಅಧಿಕಾರಿಗಳಿದ್ದಾರೆ.

ಅಧ್ಯಕ್ಷರು : ಎಲ್ಲ ಕೋರ್ಟ್‌ಗಳ ಮುಂದಿದೆ ಅಲ್ಲಿಂದ ಬರಲಿ ಆಮೇಲೆ ಮಾಡುತ್ತೇವೆ ಅಂದರು, ನಾವು ಮಾಡುವುದಿಲ್ಲ ಎಂದು ಹೇಳಲಿಲ್ಲ.

ಶ್ರೀ ಜಗದೀಶ ಶೆಟ್ಟರ್ : ಅಧ್ಯಕ್ಷರೇ, Stampit is the Investigation authority. ಅವರು ಇದನ್ನು ಮಾಡಬಹುದಲ್ಲ ! ಯಾಕೆ ಮಾಡುತ್ತಾ ಇಲ್ಲ ಎಂದು ಹೇಳಿ. ಮೊದಲಿನಿಂದಲೂ ಈ ರೀತಿ ಒಂದು ರಕ್ಷಣೆ ಮಾಡಿಕೊಂಡು ಬಂದಿದ್ದಾರೆ, ಶ್ರೀಮಾನ್ ರೋಷನ್ ಬೇಗ್ ಅವರನ್ನು ರಕ್ಷಣೆ ಮಾಡಿಕೊಂಡು ಬಂದರು ಅವರ ರಾಜೀನಾಮೆ ಕೊಡಿಸಲು ತಯಾರಿರಲಿಲ್ಲ, ಕೊನೇ ಹಂತದಲ್ಲಿ ಅಲ್ಲಿ polygraphic evidence ಹೆಸರು ಬಂದಮೇಲೆ ಅವಾಗ ರಾಜೀನಾಮೆ ಕೊಟ್ಟರು.

ಶ್ರೀ ಯು.ಆರ್. ಸಭಾಪತಿ : ಮೊದಲು ಸಿಬಿಐಗೆ ಕೊಡಿ ಅಂದರು, ಈಗ ಸ್ಟಾಂಪಿಟ್ ನವರೇ ಮಾಡಲಿ ಅನ್ನುತ್ತಿದ್ದಾರೆ. ಇದ್ಯಾವ ದ್ವಂದ್ವ ನೀತಿ ? ಸಭೆಯ ಸಮಯವನ್ನು ಹಾಳು ಮಾಡುವ ದ್ವಂದ್ವ ನೀತಿ ಇದು.

ಶ್ರೀ ಜಗದೀಶ ಶೆಟ್ಟರ್ : ಇದರಲ್ಲಿ ನಾಲ್ಕೈದು ಮಂದಿ ಸಚಿವರಾಗಿದ್ದಾರೆ, ಅವರ ಹೆಸರನ್ನು ಬಹಿರಂಗಪಡಿಸಲಿ.

ಅಧ್ಯಕ್ಷರು : ಸ್ವಾಮಿ, The entire matter is pending before the Supreme Court, and High Court. How can these people seek action ? come on tell me.ಇವರು ಆ್ಯಕ್ಟ್ ಮಾಡಲು ಆಗುವುದೇ ?

ಶ್ರೀ ಜಗದೀಶ ಶೆಟ್ಟರ್ : ಇವತ್ತು ತೆಲಗಿಯ Narco analysis test statement ಇವತ್ತು ಏನು ಬಂದಿದೆ ಅದರ ಆಧಾರದ ಮೇಲೆ ಆ ಸಚಿವರು ಎಂಬುದು ಯಾರು ಗೊತ್ತಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಸ್ಪಷ್ಟ ಹೇಳಿದ್ದೇನೆ. Narco analysis ನಲ್ಲಿ ಬಂದ ಯಾವುದೇ ಸಾಕ್ಷ್ಯ ಇರಬಹುದು ಅದು Evidence Act ಕೆಳಗೆ ಕೋರ್ಟಿನಲ್ಲಿ ನಿಲ್ಲುವುದಿಲ್ಲ, ಅದರ ಆಧಾರದ ಮೇಲೆ ಪುನಃ ಎವಿಡೆನ್ಸ್ ಸಂಗ್ರಹಿಸುತ್ತಾರೆ, ಈಗೇನು ಹೇಳಿದ್ದಾರೆ ಅದರಲ್ಲಿ ಸತ್ಯಾಂಶ ಯಾವುದು ಎಂದು ಅದರ ಬಗ್ಗೆ ಪುನಃ ಚೌಕಶಿ ಮಾಡಿ ಸಿಬಿಐನವರಾಗಲಿ ಅಥವಾ ಬಾಂಬೆಯ Special Investigation Team ಆಗಲಿ ಅವರು ಅದನ್ನು ಮುಂದುವರೆಸುತ್ತಾರೆ. ಹಾಗೆ ಅವರಿಗೆ ಸಂಪೂರ್ಣ ಮಾಹಿತಿ ಬಂದಮೇಲೆ ಇಂಥವರು ತಪ್ಪಿತಸ್ಥ ಇವನ ಮೇಲೆ ಕ್ರಮ ಜರುಗಿಸಿರಿ ಎಂದು ಹೇಳುತ್ತಾರೆ. ಆದರೆ ಕೇವಲ Narco analysis statement ಮೇಲೆ ಹೋಗಿ ಯಾರನ್ನಾದರೂ ಹಿಡಿಯಬೇಕು ಅಂದರೆ ಅದು ಆಗುವುದೂ ಇಲ್ಲ, ಕೋರ್ಟಿನಲ್ಲಿ ಅದಕ್ಕೆ ಬೆಲೆಯೂ ಇಲ್ಲ.

ಗೊಂದಲ

ಅಧ್ಯಕ್ಷರು : ಆಯಿತು, We will take up the next subject.

ಶ್ರೀ ಜಗದೀಶ ಶೆಟ್ಟರ್ : ಇವರು ಪೋಲಿಸ್ ಅಧಿಕಾರಿಗಳನ್ನು ರಕ್ಷಣೆ ಮಾಡಲು ಹೊರಟಿದ್ದಾರೆ, ಆ ತೆಲಗಿ ಜೊತೆ ಸಂಬಂಧವಿಲ್ಲ ಮಂತ್ರಿಗಳನ್ನು ಮತ್ತು ಪೋಲಿಸ್ ಅಧಿಕಾರಿಗಳನ್ನು ರಕ್ಷಣೆ ಮಾಡಲು ಹೊರಟಿದ್ದಾರೆ, ಸರ್ಕಾರದ ಈ ನೀತಿ, ಭ್ರಷ್ಟರನ್ನು ರಕ್ಷಣೆ ಮಾಡುವಂತಹ ನೀತಿಯಾಗಿದೆ. ನಾವು ಇದನ್ನು ಖಂಡಿಸಿ ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇವೆ.

ಬಿಜೆಪಿಯ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ಇವರು ಸುಮಾರು ಒಂದು ವರ್ಷದಿಂದ ಅದಕ್ಕೆ ಸಾಕಷ್ಟು ಪ್ರಚಾರ ಗಿಟ್ಟಿಸುವ ಪ್ರಯತ್ನ ಮಾಡಿದರು, ಯಾವಾಗ ಅದರಲ್ಲೇನೂ ಸಿಗಲಿಲ್ಲ ಮತ್ತು ನಾವು ಬಹಳ ಪ್ರಾಮಾಣಿಕತೆಯಿಂದ ಈ ಕೇಸನ್ನು ನಡೆಸಿದ್ದೇವೆ ಮತ್ತು ಇಡೀ ಭಾರತ ದೇಶದಲ್ಲೇ ನಮ್ಮ ಸ್ಟಾಂಪಿಟ್‌ನವರು ಈ ಕೇಸನ್ನು ಸರಿಯಾದ ರೀತಿ ನಡೆಸಿದ್ದಕ್ಕಾಗಿ ಎಲ್ಲರೂ ಕೂಡ ಪ್ರಶಂಸೆ ಮಾಡಿದ್ದಾರೆ, ಹೈಕೋರ್ಟ್ ಮಾಡಿದೆ, ಸುಪ್ರೀಂ ಕೋರ್ಟೂ ಮಾಡಿದೆ, ಪಾರ್ಲಿಮೆಂಟೂ ಕೂಡ ಮಾಡಿದೆ. ಕೊನೆಗೆ ಸಿಬಿಐನವರು ಕೂಡ ನಾವು ಮಾಡಿದಂತಹ ಕೆಲಸವನ್ನು ಒಪ್ಪಿಕೊಂಡಿದ್ದಾರೆ, ಆದರೆ ಇವರು ಒಪ್ಪುವುದಿಲ್ಲ. ಮೊದಲು ಇವರೇ ಸಿಬಿಐಗೆ ಕೊಡಿ ಅಂದರು. ಈಗ ಕೊಟ್ಟೆವು ಸ್ವಾಮಿ, ಏನಾಯಿತು ? ಈಗ ನೀವೇಕೆ ಕೊಟ್ಟಿರಿ ಎಂದು ಸಭಾತ್ಯಾಗ ಮಾಡಿದರು. ಅದೇ ರೀತಿ Narcotic analysis ಸಂಪೂರ್ಣವಾದ ಎವಿಡೆನ್ಸಲ್ಲ ಈ ಬೇಸಿಸ್ ಮೇಲೆ ಅವರು ಮುಂದುವರೆಯಬೇಕಾಗುತ್ತದೆ. ಮುಂದೆ ಅವರು ಸಂಬಂಧಪಟ್ಟವರಿಗೆ ಕೇಳುತ್ತಾರೆ, ಆಗ ಇಂತಹವರು ತಪ್ಪಿಸ್ಥರು ಅಂದರೆ ಖಂಡಿತವಾಗಿ ನಮ್ಮವರು ಕ್ರಮ ಜರುಗಿಸುತ್ತಾರೆ. ಅದನ್ನು ಬಿಟ್ಟು ಸುಮ್ಮನೆ ಇದರ ಮೇಲೆ ಅವರು ಮಾತನಾಡಬೇಕು ಎಂದು ಮಾತನಾಡಿದರೆ ಅದು ಸಮಂಜಸವಲ್ಲ, ನಾವು ಮುಚ್ಚಿಹಾಕುವ ಪ್ರಶ್ನೆಯೂ ಇಲ್ಲ, ಮುಚ್ಚಿಹಾಕುವುದೂ ಇಲ್ಲ. ನಮ್ಮಲ್ಲಿದ್ದ ಎಲ್ಲಾ ಕಾಗದ ಪತ್ರಗಳೂ ಎವಿಡೆನ್ಸೂ ಟೇಪನ್ನು ಸಂಪೂರ್ಣ ಸಿಬಿಐ ಮುಂದೆ ಸುಪ್ರೀಂ ಕೋರ್ಟ್ ಮುಂದೆ ಒಪ್ಪಿಸಲು ತಯಾರಿದ್ದೇವೆ. ಇದುವರೆಗೂ ಅವರು ಕೇಳಿದ್ದನ್ನು ಕೊಟ್ಟುಕೊಂಡು ಬಂದಿದ್ದೇನೆ ಮುಂದೆಯೂ ಕೊಡುತ್ತೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ನನಗೊಂದು ವಿವರಣೆ ಬೇಕು. What is the positon of the case ? ನೀವು ಸಿಬಿಐಗೆ ಕೊಡುತ್ತೇವೆ ಎಂದು ಕಾಗದ ಬರೆದಿದ್ದೀರಿ, ಸುಪ್ರೀಂ ಕೋರ್ಟ್‌ನವರು 15 ದಿವಸದಲ್ಲಿ ಇದನ್ನೆಲ್ಲಾ ವಹಿಸಿಕೊಡಬೇಕು ಎಂದು ಹೇಳಿದರು. what is the position of the case ? ಶ್ರೀ ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಮ್ಮ ಪೋಲಿಸ್ ಟೀಮ್ ಕಂಟಿನ್ಯೂ ಮಾಡಿದ್ದೀರಾ ? ಅದು ಎಕ್ಸಿಸ್ಟಿಂಗ್‌ನಲ್ಲಿದೆಯೆ ? ತನಿಖೆ ಮುಂದುವರೆಸಿದೆಯ ಅಥವಾ ಸಿಬಿಐ ಈ ಕೇಸ್ ಅನ್ನು ತೆಗೆದುಕೊಂಡಿದೆಯಾ ? what exactly is the case ಅನ್ನುವುದನ್ನು ದಯಮಾಡಿ ಇ ಸದನಕ್ಕೆ ರಾಜ್ಯಕ್ಕೆ ತಿಳಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದರಲ್ಲಿ ತಿಳಿಸುವುದಕ್ಕೆ ಅಂತಹ ವಿಷಯವೇನಿಲ್ಲ, ತಮಗೆ ಗೊತ್ತಿದೆ. ಕೇಸ್ ಒಪ್ಪಿಸಬೇಕು ಅಂದರೆ ಈಗಾಗಲೇ ನಾವು ಸಚಿವಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡು ಮತ್ತು ನಮ್ಮಲ್ಲಿ ಇಷ್ಟೊಂದು ಕೇಸನ್ನು ನಾವು ರಿಜಿಸ್ಟರ್ ಮಾಡಿದ್ದೇವೆ, ತನಿಖೆ ಮಾಡಿದ್ದೇವೆ, ಚಾರ್ಜ್‌ಶೀಟ್ ಹಾಕಿದ್ದೇವೆ ಎಂದು ಹೇಳಿ. ನಾವು ಅದನ್ನು ಅವರಿಗೆ ವಹಿಸಿಕೊಟ್ಟಿದ್ದೇವೆ ಆದರೆ ಇವೆಲ್ಲಾ ಕೇಸುಗಳನ್ನು ನಮಗೆ ನಡೆಸುವುದಕ್ಕಾಗುವುದಿಲ್ಲ ಎನ್ನತಕ್ಕಂಥ Affiadavit ನ್ನು ಅವರೇ ಸುಪ್ರೀಂ ಕೋರ್ಟ್ ಮುಂದೆ ಹಾಕಿದ್ದಾರೆ. ಅದಕ್ಕೆ ಅಲ್ಲಿರತಕ್ಕ STAMPIT ಗಳು ಮತ್ತು SIT ಗಳು ಅವರೇ ಮಾಡತಕ್ಕಂಥದ್ದು ಉತ್ತಮ ಎನ್ನತಕ್ಕ ರೀತಿಯಲ್ಲಿ ಅವರ ಬರವಣಿಗೆಯಲ್ಲಿ ಅವರು ಹೇಳಿಕೊಂಡಿದ್ದಾರೆ ಇನ್ನೂ ಸುಪ್ರೀಂ ಕೋರ್ಟ್ ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿಲ್ಲ. ಅಂದರೆ ಕೇಸನ್ನು postpone ಮಾಡಿದ್ದಾರೆ, ಇದು ಒಂದು ಎರಡನೆಯದು ಈಗ STAMPIT ಇದೆ. ಆದರೆ ನಾವು ಏನು ಮಾಡಬೇಕು, ಏನಿಲ್ಲ ಎನ್ನುವ ಒಂದು ಪ್ರಶ್ನೆ ಇದೆ. Suppose CBI ನವರು ಯಾವ ಕೇಸ್‌ಗಳನ್ನು ತೆಗೆದುಕೊಳ್ಳುತ್ತಾರೋ ಅಥವಾ ಅವರು ಯಾವ ಹಂತದಿಂದ ಮುಂದೆ

investigation ಅನ್ನು ಮಾಡುತ್ತಾರೋ, ಇದನ್ನೂ ಕೂಡ ನಾವು ನೋಡಬೇಕಾಗುತ್ತದೆ. ಅದಕ್ಕಾಗಿ ನಮ್ಮ ಪಾತ್ರ ಏನಿತ್ತು ಅಥವಾ ನಾವೇನು ಕೆಲಸ ಮಾಡಬೇಕಾಗಿತ್ತು, ಆ ಕೆಲಸವನ್ನು ಬಹಳ ದಕ್ಷತೆಯಿಂದ ನಮ್ಮ ಅಧಿಕಾರಿಗಳು ಮಾಡಿಕೊಂಡು ಬಂದಿದ್ದಾರೆ. ಇನ್ನು ಮುಂದೆಯೂ ಕೂಡ ಆ ಸುಪ್ರೀಂ ಕೋರ್ಟ್ ಆದೇಶವಾಗಲೀ, ಆ ಹೈಕೋರ್ಟ್ ಆದೇಶವಾಗಲಿ ಏನೇನು ಬರುತ್ತದೋ ಅದನ್ನು ನಾವು ಪಾಲನೆ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಗೃಹಸಚಿವರಲ್ಲಿ ನಾನು ಕೇಳುತ್ತಿರುವುದು ಇಷ್ಟೇನೆ. ನಮ್ಮ ಪೋಲಿಸ್ ಇಲಾಖೆಯವರು ಕೇಸ್‌ನ್ನು investigation ಮುಂದುವರಿಸಿದ್ದೀರಾ ಅಥವಾ ಸ್ಥಗಿತ ಮಾಡಿದ್ದೀರಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೇಳಿದ್ದೇನೆ, ನಮ್ಮ STAMPIT ಇನ್ನೂ ಇದೆ. ಏಕೆಂದರೆ ಅವರು ಸಂಪೂರ್ಣವಾಗಿ ಎಲ್ಲಾ ಕೇಸಸ್‌ನ್ನೂ CBI ತೆಗೆದುಕೊಳ್ಳುವವರೆಗೆ ನಾವು ಇದರ ಬಗ್ಗೆ ಕಣ್ಣಲ್ಲಿ ಕಣ್ಣಿಟ್ಟು ನೋಡಲೇಬೇಕಾಗುತ್ತದೆ. ಏಕೆಂದರೆ, ರಾಷ್ಟ್ರದ ಹಿತದೃಷ್ಟಿಯಿಂದ ಮತ್ತು ಒಂದು ಆರ್ಥಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡತಕ್ಕ ಕೇಸ್ ಇರುವುದರಿಂದ ನಮ್ಮವರು ಇನ್ನೂ ಕೂಡ ಈ investigation ನ್ನು ಮಾಡುತ್ತಲೇ ಇದ್ದಾರೆ, continue ಮಾಡುತ್ತಿದ್ದಾರೆ. Till CBI takes all the cases ಮಾಡುತ್ತಾರೆ. Suppose ಅವರು ಹತ್ತು ಕೇಸುಗಳನ್ನು ತೆಗೆದುಕೊಂಡರು, ಇನ್ನು ಉಳಿದದ್ದು ಐದಾದರೂ ಮಾಡಬೇಕು, ಎರಡಾದರೂ ಮಾಡಲೇಬೇಕಾಗುತ್ತದೆ. ಅದಕ್ಕಾಗಿ ನಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳತಕ್ಕಂಥದ್ದನ್ನು ನಾವು ಮಾಡುತ್ತಿಲ್ಲ. ಆದರೆ ಈ ರೀತಿಯಾಗಿ ಬೇಜವಾಬ್ದಾರಿ ಮಾತುಗಳನ್ನು ಹೇಳಿಕೊಂಡು ಟೀಕೆ ಟಿಪ್ಪಣಿ ಮಾಡತಕ್ಕಂಥದ್ದು ಸರಿಯಲ್ಲ. ಅದನ್ನು ಅವರು ತಿಳಿದುಕೊಳ್ಳಬೇಕಾಗಿತ್ತು. ದುರ್ದೈವದಿಂದ ಅವರು ಅದನ್ನು ಏಕೆ ಈ ರೀತಿಯಾಗಿ ಮಾಡಿದ್ದಾರೋ ಗೊತ್ತಿಲ್ಲ. ಮತ್ತು ಇನ್ನೊಂದು CBI ನವರು details ಅನ್ನು ಕೇಳಿದ್ದಾರೆ. ಅಂದರೆ Supreme Court has given two weeks time to all state Governments to give report to CBI. CBI will take three weeks time and decide which cases they will take. ಈ ಸ್ಥಿತಿಯಲ್ಲಿದೆ. ಖಂಡಿತವಾಗಿ ನಾವು CBI ಗೂ Co-operate ಮಾಡುತ್ತೇವೆ, ಮತ್ತು ಹೈಕೋರ್ಟ್‌ಗಳಿಗೂ ಕೂಡ ನಮ್ಮ ಸಹಕಾರ ಇರುತ್ತದೆ ಏಕೆಂದರೆ ಇದರಲ್ಲಿ ಸತ್ಯಾಂಶ ಹೊರಗೆ ಬರಲಿ ಎನ್ನತಕ್ಕಂಥದ್ದೇ ನಮ್ಮ ಆಸೆ.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು:

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ 151(2)ನೆಯ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್ 2002ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಜಿಲ್ಲಾ ಪಂಚಾಯತ್ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

4. ಕಾರ್ಯದರ್ಶಿಯವರ ವರದಿ:

ಶ್ರೀ ಟಿ.ರಾಜಣ್ಣ(ಕಾರ್ಯದರ್ಶಿಗಳು) : ಮಾನ್ಯ ಅಧ್ಯಕ್ಷರೇ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(1) ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ, 2004.(ಅನುಬಂಧ–I)